**ಓ.ಎಸ್. 24/2023 ಪಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 22.08.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿರುತ್ತೇನೆ.**

ಈಗ ನನಗೆ ತೋರಿಸಿದ ಸಹಿಗಳು ದಿನಾಂಕ 24.02.2018 ರ ಕ್ರಯದ ಕರಾರು ಪತ್ರ ಹಾಗೂ ದಿನಾಂಕ 19.09.2019 ರ ಪೂರಕ ಕರಾರು ಪತ್ರಗಳಿಗೆ ನಾನು ಸಾಕ್ಷಿಯಾಗಿ ಮಾಡಿರುವ ಸಹಿಗಳಾಗಿವೆ. ಸಾಕ್ಷಿಯು ಸಹಿಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಶಾನೆ ಪಿ 1 (ಎ) ಮತ್ತು ನಿ ಪಿ 2(ಎ) ಎಂದು ನಿಶಾನಿಸಲಾಯಿತು. ನಿ ಪಿ 1 ಕ್ಕೆ ನನ್ನ ಜೊತೆಯಲ್ಲಿ ತುಳಸಿರಾಮ್ ಮತ್ತು ದೇವೇಗೌಡ ಎಂಬುವವರು ಸಹ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 1ಬಿ ಮತ್ತು 1ಸಿ ಎಂದು ಗುರುತಿಸಲಾಯಿತು. ನಿ ಪಿ 2ಕ್ಕೆ ತುಳಸಿರಾಮ್ ಮತ್ತು ಸತ್ಯನಾರಾಯಣ ಎಂಬುವವರು ಸಹ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 2ಬಿ ಮತ್ತು 2ಸಿ ಎಂದು ನಿಶಾನಿಸಲಾಯಿತು. ನಿ ಪಿ 1 ರಲ್ಲಿ ಕೆ ಎನ್ ಗೋಪಾಲಸ್ವಾಮಿರವರ ಸಹಿಗಳು 4 ಕಡೆ ಇವೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಅನುಕ್ರಮವಾಗಿ ನಿಶಾನೆಪಿ 1 ಡಿ, ಇ, ಎಫ್, ಜಿ ಎಂದು ಗುರುತಿಸಲಾಯಿತು. ನಿ ಪಿ 2 ರಲ್ಲಿ ಕೆ ಎನ್ ಗೋಪಾಲಸ್ವಾಮಿರವರ ಸಹಿಗಳು 4 ಕಡೆ ಇವೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 2 ಡಿ, ಇ, ಎಫ್, ಜಿ ಎಂದು ಗುರುತಿಸಲಾಯಿತು. ಈಗ ನಿ ಪಿ 1 ಮತ್ತು 2ಕ್ಕೆ ವಾದಿ ಸುನೀತಾರವರು ಸಹ ಸಹಿ ಮಾಡಿದ್ದಾರೆ. ಸಾಕ್ಷಿಯು ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 1ಹೆಚ್, ನಿಶಾನೆ ಪಿ 2ಹೆಚ್ ಎಂದು

ಗುರುತಿಸಲಾಯಿತು. ನಿಪಿ 1 ಮತ್ತು 2 ನ್ನು ಪತ್ರಬರಹಗಾರರಾದ ಸತ್ಯನಾರಾಯಣರವರು ಬರೆದಿರುತ್ತಾರೆ.

**<u>ಪಾಟೀ ಸವಾಲುಃ ಕಾಲಾವಕಾಶ ನೀಡಲಾಯಿತು.</u>**

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಪಾಂಡವಪುರ**